ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.**262/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಶಿವ | ಸಿ.ಡಬ್ಲ್ಯೂ‌ಃ 4 ಪಿ.ಡಬ್ಲ್ಯೂಃ 3 |
| ತಂದೆಯ ಹೆಸರು | ಃ ರಂಗೇಗೌಡ | |
| ವಯಸ್ಸು | ಃ 55 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ವಾಲೆ ಕರಟ್ಟಿ | |

ದಿನಾಂಕಃ 12.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಪರಿಚಯ ಇರುತ್ತಾರೆ. ಆರೋಪಿಯು ಗೋಣಿಬೀಡು ನಿವಾಸಿಯಾಗಿರುತ್ತಾರೆ. ಈಗ ನನಗೆ ತೋರಿಸಿದ ಅಮಾನತ್ತು ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಮಹಜರ್ ನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ನಿ.ಪಿ.6 ದಾಖಲೆಗೆ ನಾನು ದಿಃ 17.07.2022 ರಂದು 1.00 ರಿಂದ 3.00 ಗಂಟೆಯ ಅವಧಿಯಲ್ಲಿ ಮಹಜರ್ ಕಾಲದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ.5 ಮತ್ತು 6 ರವರು ಹಾಜರಿದ್ದರು. ಈಗ ನನಗೆ ತೋರಿಸಿದ ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಛಾಯಚಿತ್ರವನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಆರೋಪಿಯ ಮೊಬೈಲ್ ಪೋನ್ ನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲದಲ್ಲಿ ನಿ.ಪಿ.7 ಛಾಯಚಿತ್ರವನ್ನು ಪೊಲೀಸರು ನನ್ನ ಸಮಕ್ಷಮ ತೆಗೆದಿರುತ್ತಾರೆ. ಈಗ ನನಗೆ ತೋರಿಸಿದ ಸ್ಥಳ ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಮಹಜರ್ ನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಿ.ಪಿ.8 ದಾಖಲೆಗೆ ಸಂಜೆ 4.00 ರಿಂದ 5.00 ಗಂಟೆ ಸಮಯದಲ್ಲಿ ದಿಃ 17.07.2022 ರಂದು ಹಾಕಿರುತ್ತೇನೆ. ನಿ.ಪಿ.8 ದಾಖಲೆಗೆ ನಾನು ಸಹಿ ಮಾಡುವ ಸಮಯದಲ್ಲಿ ಚಾಸಾ.5 ಮತ್ತು 6 ರವರು ಹಾಜರಿದ್ದರು. ಈಗ ನನಗೆ ತೋರಿಸಿದ 4 ಛಾಯಚಿತ್ರಗಳಲ್ಲಿ

ನಾನು ಹಾಜರಿರುತ್ತೇನೆ. ಛಾಯಚಿತ್ರಗಳನ್ನು ನಿ.ಪಿ.9 ರಿಂದ 12 ಎಂದು ಗುರುತಿಸಲಾಯಿತು. ನಿ.ಪಿ.9 ರಿಂದ 12 ಛಾಯಚಿತ್ರಗಳನ್ನು ಆರೋಪಿಯ ಮನೆಯಲ್ಲಿ ಹಣ ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ತೆಗೆದಿರುವ ಛಾಯಚಿತ್ರವಾಗಿರುತ್ತದೆ. ನಿ.ಪಿ.2 ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಿ.ಪಿ.2 ರಲ್ಲಿ ಇರುವ ಸಹಿಯನ್ನು ನಾನು ದಿಃ 30.07.2022 ರಂದು ಹಾಕಿರುತ್ತೇನೆ. ಎಷ್ಟು ಗಂಟೆಗೆ ನಿ.ಪಿ.2 ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಿ.ಪಿ.2 ಮಹಜರ್ ಗೆ ಸಹಿ ಮಾಡುವ ಸಮಯದಲ್ಲಿ ನನ್ನ ಜೊತೆ ಚಾಸಾ.1 ಮತ್ತು 6 ರವರು ಹಾಜರಿದ್ದರು. ನಿ.ಪಿ.3 ಮತ್ತು 4 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ನ್ಯಾಯಾಲಯದ ಆದೇಶದ ಮೇರೆಗೆ ಹಣ ಬಿಡುಗಡೆ ಮಾಡಿ ಠಾಣೆಯಿಂದ ಪಡೆಯುವ ಸಮಯದಲ್ಲಿ ನಿ.ಪಿ.3 ಮತ್ತು 4 ಛಾಯಚಿತ್ರವನ್ನು ಪೊಲೀಸರು ತೆಗೆದಿರುತ್ತಾರೆ. ಈಗ ನನಗೆ ತೋರಿಸಿದ ನೋಟೀಸುಗಳಲ್ಲಿ ಇರುವ ಸಹಿಗಳು ನನ್ನದೇ ಇರುತ್ತದೆ. ನೋಟೀಸುಗಳನ್ನು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಮತ್ತು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಶಾಲೆಯ ಅಕ್ಷರ ದಾಸೋಹದ ಹಣವನ್ನು ಆರೋಪಿಯು online ಮೂಲಕ ಆತನ ಖಾತೆಗೆ ವರ್ಗಾವಣೆ ಮಾಡಿರುತ್ತಾನೆ. ಆ ಕಾರಣದಿಂದ ಸದರಿ ಮಹಜರ್ ನ್ನು ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

2. ನಿ.ಪಿ.6 ಮಹಜರ್ ನ್ನು ದಿಃ 17.07.2022 ರಂದು 3.00 ರಿಂದ 4.00 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.6 ದಾಖಲೆಗೆ ನನ್ನ ಜೊತೆ ಚಾಸಾ.5 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.8 ಮಹಜರ್ ನ್ನು ದಿಃ 17.07.2022 ರಂದು ಸಂಜೆ 4.30 ರಿಂದ 5.30 ಗಂಟೆ ವರೆಗೆ ಮಾಡಿರುತ್ತಾರೆ

ಎಂದರೆ ಸರಿ. ನಿ.ಪಿ.8 ಮಹಜರ್ ಮಾಡುವ ಸಮಯದಲ್ಲಿ ಚಾಸಾ.5 ರವರು ನನ್ನ ಜೊತೆ ಹಾಜರಿದ್ದರು ಎಂದರೆ ಸರಿ. ದಿಃ 30.07.2022 ರಂದು ಮಾಡಿರುವ ನಿ.ಪಿ.2 ಮಹಜರ್ ನ್ನು ಮಧ್ಯಾಹ್ನ 1.00 ರಿಂದ 1.30 ಗಂಟೆ ವರೆಗೆ ಪೊಲೀಸರು ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.2 ಮಹಜರ್ ಆಗುವ ಸಮಯದಲ್ಲಿ ನನ್ನ ಜೊತೆ ಚಾಸಾ.6 ರವರು ಹಾಜರಿದ್ದರು ಎಂದರೆ ಸರಿ. ನಿ.ಪಿ.2 ಮಹಜರ್ ಮೂಲಕ ಹಣವನ್ನು ಠಾಣೆಯಿಂದ ಚಾಸಾ.2 ರವರು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಈ ಪ್ರಕರಣದ ಎಲ್ಲಾ ವಿಚಾರವನ್ನು ಚಾಸಾ.1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಡಿ.ಕೆ.ಪಿ. ವಕೀಲರಿಂದ – ಆರೋಪಿತನ ಪರವಾಗಿ</u>

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿನಾಂಕ **: 12.02.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ – ಆರೋಪಿತನ ಪರವಾಗಿ

4. ಚಾಸಾ-1 ರವರು ನನಗೆ 10-15 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ವಾಲೇಕರಟ್ಟಿಯ ನಿವಾಸಿಯಾಗಿರುತ್ತೇನೆ. ವಾಲೇಕರಟ್ಟಿಯಿಂದ ಗೋಣಿಬೀಡುವಿಗೆ 1 ಕಿ.ಮೀ. ಅಂತರ ಇರುತ್ತದೆ. ನಾನು ಎಲ್. ಐ. ಸಿ. ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ನನ್ನ ಜಮೀನು ವಾಲೇಕರಟ್ಟಿಯಲ್ಲಿ ಇರುತ್ತದೆ ಎಂದರೆ ಸರಿ. ಆರೋಪಿಯು ನನಗೆ ಚಿಕ್ಕಂದಿನಿಂದಲೂ ಪರಿಚಯ ಇರುತ್ತಾರೆ. ಆರೋಪಿಯು ಗೋಣಿಬೀಡು ಶಾಲೆಯ ಹತ್ತಿರದಲ್ಲಿಯೇ ತರಕಾರಿ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ನಾನು 2014 ರಲ್ಲಿ ಗೋಣಿಬೀಡು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದೆನು ಎಂದರೆ ಸರಿ. 2014 ರಿಂದ ಇಂದಿನವರೆಗೂ ನಾನು ಗೋಣಿಬೀಡು ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಗೋಣಿಬೀಡು ಸರ್ಕಾರಿ ಶಾಲೆಗೆ ಎಸ್.ಡಿ.ಎಂ.ಸಿ. ಇರುತ್ತದೆ ಎಂದರೆ ಸರಿ. ಹಳೆ ವಿದ್ಯಾರ್ಥಿ ಸಂಘ ಮತ್ತು ಎಸ್.ಡಿ.ಎಂ.ಸಿ.ಬೇರೆ ಬೇರೆ ಎಂದರೆ ಸರಿ. ಹಳೆ ವಿದ್ಯಾರ್ಥಿ ಸಂಘದವರು ಶಾಲೆಯಲ್ಲಿ ಕಾರ್ಯಕ್ರಮವನ್ನು ನಿರೂಪಿಸುತ್ತಾರೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ದಾಖಲಾತಿಗೆ ಸಹಿಯನ್ನು ಮಾಡಿರುತ್ತೇನೆ. ನಾನು ಈ ಪ್ರಕರಣದಲ್ಲಿ ಪೊಲೀಸ್ ದಾಖಲಾತಿಗೆ ಎರಡು ಸಹಿಗಳನ್ನು ಹಾಕಿರುತ್ತೇನೆ. ಸದರಿ ಸಹಿಗಳನ್ನು ನಾನು ಒಂದೇ ಸ್ಥಳದಲ್ಲಿ ಹಾಕಿರುತ್ತೇನೆ. ನಾನು ಪೊಲೀಸರು ತೋರಿಸಿರುವ ದಾಖಲಾತಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ದಿನಾಂಕ 16.07.2022 ರಂದು ಚಾಸಾ-1 ರವರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರವಾಣಿಯಲ್ಲಿ ನನ್ನ ಜೊತೆ ಮಾತನಾಡಿರುತ್ತಾರೆ.

5. ಚಾಸಾ-1 ರವರಿಗೆ ಈ ಪ್ರಕರಣದಲ್ಲಿ ಏನು ಮಾಡಬೇಕು ಎಂದು ಸಲಹೆ ನೀಡಿರುವುದಿಲ್ಲ. ಪೊಲೀಸ್ ದಾಖಲಾತಿಗೆ ಎರಡು ಸಹಿಗಳನ್ನು ಮಾಡುವ ಪೂರ್ವದಲ್ಲಿ ನನಗೆ ಪೊಲೀಸರು ಯಾವುದೇ ನೋಟೀಸ್ ನೀಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಮೊಬೈಲ್ ಫೋನನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮೊಬೈಲ್ ಫೋನ್ ಯಾವ ಕಂಪೆನಿಗೆ ಸೇರಿರುತ್ತದೆ ಎಂದು ನಾನು ಗಮನಿಸಿರುವುದಿಲ್ಲ. ದಿನಾಂಕ 17.07.2022 ರಂದು ಪೊಲೀಸರು ಮಧ್ಯಾಹ್ನ 3-00 ಗಂಟೆಗೆ ಮೊಬೈಲ್ ಫೋನ್ ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮೊಬೈಲ್ ಫೋನ್ ಬಣ್ಣ ನನಗೆ ನೆನಪಿಲ್ಲ. ಪೊಲೀಸರು ನನ್ನ ಸಮಕ್ಷಮ ಸದರಿ ಫೋನಿನ ಮೋಡೆಲ್ ನಂಬರ್ ಪರಿಶೀಲನೆ ಮಾಡಿರುತ್ತಾರೆ. ಸದರಿ ಫೋನಿನ ಮೋಡೆಲ್ ನಂಬರ್ ನನಗೆ ಈಗ ನೆನಪಿಲ್ಲ. ನಾನು ಸಹಿ ಮಾಡಿರುವ ದಾಖಲಾತಿಯಲ್ಲಿ ಪೊಲೀಸರು ಸದರಿ ಫೋನಿನ ಮೋಡೆಲ್ ನಂಬರ್ ನ್ನು ಬರೆದಿರುತ್ತಾರೆ. ನಿಪಿ-6(ಎ) ಸಹಿಯು ಗೋಣಿಬೀಡು ಪೊಲೀಸ್ ಠಾಣೆ ಯಲ್ಲಿ ನಾನು ಹಾಕಿರುವ ಸಹಿ ಆಗಿರುತ್ತದೆ. ನಿಪಿ-6 ಮಹಜರಿನಲ್ಲಿ ಮೊಬೈಲ್ ಫೋನಿನ ಮೋಡೆಲ್ ನಂಬರ್ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ನಿಪಿ-6 ಮಹಜರನ್ನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ಏನು ಬರೆದಿರುತ್ತದೆ ಎಂದು ಪೊಲೀಸರು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿ. ಪೊಲೀಸರು ಸದರಿ ಮೊಬೈಲ್ ಫೋನನ್ನು ನನ್ನ ಸಮಕ್ಷಮ ಆರೋಪಿಯಿಂದಲೇ ಆಪರೇಟ್ ಮಾಡಿಸಿರುತ್ತಾರೆ. ಸದರಿ ಸಮಯದಲ್ಲಿ ಫೋನ್ ಚಾಲನೆ ಮಾಡುವ ಸ್ಥಿತಿಯಲ್ಲಿ ಇತ್ತು. ಪೊಲೀಸರು ಆರೋಪಿಯ ಬಳಿ ಫೋನ್ ಮೂಲಕ ಹಣವನ್ನು ಹೇಗೆ ತೆಗೆದಿರುತ್ತಿಯಾ ಎಂದು ವಿಚಾರಿಸಿರುತ್ತಾರೆ. ಸದರಿ ಫೋನ್‌ಲ್ಲಿ ಎರಡು ಸಿಮ್ ಗಳನ್ನು ಹಾಕುವ ವ್ಯವಸ್ಥೆ ಇತ್ತು. ಸದರಿ ಫೋನ್ ನಲ್ಲಿ ಎಷ್ಟು ಸಿಮ್‌ಗಳು ಇದ್ದು ಎಂದು ನಾನು ಗಮನಿಸಿರುವುದಿಲ್ಲ. ಫೋನ್ ಸಿಮ್‌ನ ಆಧಾರದಲ್ಲಿ ಸದರಿ ಫೋನ್‌ನ ನಂಬರನ್ನು ಹೇಳಲು ಸಾಧ್ಯವಾಗುತ್ತದೆ ಎಂದರೆ ಸರಿ. ನಾನು ನೋಡಿರುವ ಫೋನ್ ಸಿಮ್ ನಂಬರ್ ಏನು ಎಂದು ನನಗೆ ಗೊತ್ತಿಲ್ಲ.

6. ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ